ಮೈಸೂರ ಗಿಜಿಟ.

ನಂ. XXXI. ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 38.

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ॥ 24, ಸ॥ 1896.

IIನೇ ಭಾಗ.

ಇಂಡ್ಯಾ ಗವರ್ನ್‌ಮೆಂಟ್, ರೆಸಿಡೆಂಟರು, ಜೇಫ್ ಜಡ್ಜ್‌ರು ವಗ್ಯೆರೆರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ನಂದೀದುರ್ಗದ ಡಿವಿಜ್ ಡಿಸ್ಟ್ರಿಕ್ಟ್ ಜಡ್ಜ್‌ಯವರ ಕೋರ್ಟ್‌ನಲ್ಲಿ.

ಸ॥ 1896—97ನೇ ಇಸವಿ ಮಿ॥ ಅರ್ಜೀ ನಂಬರ್ 45.

ಮೃತಪಟ್ಟ ಜಯರಾಮನಾಯಡು ಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು, ಬೆಂಗಳೂರು ಕಿರ್ಚೀಕಟ್ಟೆಗೆ ಸೇರಿದ ಬೆಂಕೀನವಾಬರಪೇಟೆಯಲ್ಲಿ ಇರುವ ಚಂಚಮ್ಮನು, ಮೃತಪಟ್ಟ ಸದರೀ ಜಯರಾಮನಾಯಡು ಯವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಬೆಂಕೀನವಾಬರ ಪ್ಯಾಟೆ ಸ್ಥಳದ ಚಂಚಮ್ಮನು, ಮದರಾಸ್ ವಾಸಸ್ಥರಾಗಿ ಮೃತಪಟ್ಟ ಜಯರಾಮನಾಯಡರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ॥ 1860ನೇ ಇಸವಿ 27ನೇ ಆಕ್ಟ್ಸು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚಂಚಮ್ಮನ ಅರ್ಜಿಯನ್ನು 1896ನೇ ಇಸವಿ ನವಂಬರ್ ತಿಂಗಳ ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಡಿಟೋ ಮೃತಪಟ್ಟ ಜಯರಾಮನಾಯಡರ ಆಸ್ತಿಗ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರಿ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ॥ 1896—97ನೇ ಇಸವಿ ಮಿ॥ ಅರ್ಜೀ ನಂಬರ್ 48.

ಮೃತಪಟ್ಟ ಚುಚ್ಚುರಕನಹಳ್ಳಿ ಕೇಷಾಚಾರ್ಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರು, ಹೊಸಕೋಟೆ ತಾಲ್ಲೂಕು ಕಲ್ಲುಕುಂಟೆ ಅಗ್ರಹಾರದಲ್ಲಿ ಇರುವ ಕೇಷಮ್ಮನು, ಮೃತಪಟ್ಟ ಸದರೀ ಚುಚ್ಚುರಕನ ಹಳ್ಳಿ ಕೇಷಾಚಾರ್ಯರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿಮೇಲೆ ಕಲ್ಲುಕುಂಟೆ ಅಗ್ರಹಾರದ ಸ್ಥಳದ ಕೇಷಮ್ಮನು, ಕಲ್ಲುಕುಂಟೆ ಅಗ್ರಹಾರದ ವಾಸಸ್ಥರಾಗಿ ಮೃತಪಟ್ಟ ಕೇಷಾಚಾರ್ಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ॥ 1860ನೇ ಇಸವಿ 27ನೇ ಆಕ್ಟ್ಸು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೇಷಮ್ಮನವರ ಅರ್ಜಿಯನ್ನು ಸ॥ 1896ನೇ ಇಸವಿ ನವಂಬರ್ ತಿಂಗಳ ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೇಷಾಚಾರ್ಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬—97ನೇ ಇಸವಿ ಮಿ|| ಅರ್ಜೀ ನಂಬರ್ 50.

ಮೃತಪಟ್ಟ ಪಾಮಂಡಹಳ್ಳಿ ದ್ಯಾವಣಂಣನವರಅಲಪ್ಪನಮಗ ಮರಿಯಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಚಿಕ್ಕಬಳ್ಳಾಪುರದ ತಾಲ್ಲೂಕು ಕಸಬಾ ಹೋಬಳಿ ಬೋದೆಗಾನಹಳ್ಳಿಯಲ್ಲಿರುವ ಲಕ್ಷ್ಮಕ್ಕನು, ಮೃತಪಟ್ಟ ಸದರೀ ಮರಿಯಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಬಳ್ಳಾಪುರದ ತಾಲ್ಲೂಕು ಬೋದೆಗಾನಹಳ್ಳಿ ಸ್ಥಳದ ಲಕ್ಷ್ಮಕ್ಕನು, ಚಿಕ್ಕಬಳ್ಳಾಪುರದ ತಾಲ್ಲೂಕು ಜೋಡಿ ಪಾಮಂಡಹಳ್ಳಿ ವಾಸಸ್ಥರಾಗಿ ಮೃತಪಟ್ಟ ಮರಿಯಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಕ್ಷ್ಮಕ್ಕನ ಅರ್ಜಿಯನ್ನು ಸ್ ೧೮೯೬ನೇ ಇಸವಿ ನವಂಬರ್ ತಿಂಗಳ ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮರಿಯಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬ನೇ ಇಸವಿ ಸೆಪ್ಟಂಬರ್ ತಿಂಗಳ 12ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೮೯೬—97ನೇ ಇಸವಿ ಮಿ|| ಅರ್ಜೀ ನಂಬರ್ 82.

ಮೃತಪಟ್ಟ ರಾಯಕಿಂಗರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಹೊಸಕೋಟೆ ಕಸಬೆಯಲ್ಲಿ ಇರುವ ಮೋಹನಕಿಂಗ್, ಮೃತಪಟ್ಟ ಸದರೀ ರಾಯಕಿಂಗರಿಗೆ ಮಗನು ಆಗಬೇಕೆಂಬ ಹಕ್ಕುದಾರಿಮೇಲೆ ಹೊಸಕೋಟೆ ಸ್ಥಳದ ಮೋಹನಕಿಂಗರು, ಹೊಸಕೋಟೆ ವಾಸಸ್ಥರಾಗಿ ಮೃತಪಟ್ಟ ರಾಯಕಿಂಗರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೋಹನಕಿಂಗರ ಅರ್ಜಿಯನ್ನು ಸ್ ೧೮೯೬ನೇ ಇಸವಿ ನವಂಬರ್ ತಿಂಗಳ ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಯಕಿಂಗರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖಿನಲ್ಲಿ ಕೋರ್ಟ್ ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ದಿವಾಳಿಯಾದ ಡಿಕ್ರಿದೇಣೀದಾರ ಕೋಲಾರ ಡಿಸ್ಟ್ರಿಕ್ಟ್ ಬವುರಿಂಗ್‌ಪೇಟೆಯಲ್ಲಿರುವ ಬೆಸ್ತರ ಮುನಿಯಪ್ಪನ ಮಗ ರಾಮಣ್ಣನ ವಿಷಯದಲ್ಲಿ—

ಸ್ ೧೮೯೫—96ನೇ ಇಸವಿ ದಿವಾಳಿ ಕೇಸ್ ನಂ. 145.

ಹುಕುಂ,

ಮೇಲ್ಕಂಡ ರಾಮಣ್ಣನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟ್ ರೂಬರೂ ಅರ್ಜಿದಾರನಾದ ರಾಮಣ್ಣನ ಪರವಾಗಿ ಮೆಸ್ಸರ್ಸ್ ಪಾರ್ಥಸಾರಥಯ್ಯಂಗಾರ್ರ) ಯದುರಿಗೆ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು) ತಮಗೆ ಈ ದರ್ಯಾಫ್ತೀ ನೋಟೀಸು ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು ಯಾರಂದರೆ,—ಬವುರಿಂಗ್‌ಪೇಟೆಯಲ್ಲಿರುವ 1ನೇ ಪಳ್ಳಿಗರ ಪಿಲ್ಲಣ್ಣ, 2ನೇ ಪಳ್ಳಿಗರ ಯರ್ರಪ್ಪ, 3ನೇ ಮಾಲೂರು ಗೊಲ್ಲ ಪಿಲ್ಲಣ್ಣ, 4ನೇ ಪೂಜಾರಿ ಹನುಮಪ್ಪ, 5ನೇ ಸುಬ್ರಹ್ಮಣ್ಯಶೆಟ್ಟಿ, 6ನೇ ಬವುರಿಂಗ್‌ಪೇಟೆ ತಾಲ್ಲೂಕು ಮಾದಮಂಗಲದ ಕೋಬಳಿ ಸೂಲಕುಂಟೆಯಲ್ಲಿರುವ ಸಂಜೀವಯ್ಯ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ರಾಮಣ್ಣನು ತನ್ನ ಸಾಲಗಾರ್ರಿಗೆ ಪಾವತಿ ಬಗ್ಯೆ ಮಾಕೆಯಾನಾ ತಪ್ಪದೆ ಈ ಕೋರ್ಟಿಗೆ ಎರಡು ರೂಪಾಯಿ ಹಾಜರ್ಮಾಡುವ ಷರತ್ತಿನ ಮೇಲೆ ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಷಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿರ್ಬಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

1896ನೇ ಇಸವಿ ಫಿಬ್ರವರಿ 13ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರ್ ನಮ್ಮ ದಸ್ತಖತ್ತನಿಸಿ ಕೊಡಲ್ಪಟ್ಟಿತು.

ರುಜುವಾತಾದ ಸಾಲದಪಟ್ಟಿ,

ನಂಬರು.	ಲೇಣೇದಾರರ ಹೆಸರು.	ಸಾಲದ ಮೊಬಲಗು.	ಪರಾ.
1	ಬವುರಿಂಗ್‌ಪೇಟೆಯಲ್ಲಿರುವ ಲಕ್ಷ್ಮಯ್ಯನ ಮಗ ಪಳ್ಳಿಗರ ಪಿಲ್ಲಣ್ಣ ..	19—4—0	ಕೋಲಾರ ಗೋಲ್ಡ್‌ಫೀಲ್ಡ್ ಮ್ಯುನಿಸಿಪಲ್ ಕೋರ್ಟ್ ಸ್ ೧೮೯೩–94ನೇ ಇಸವಿ ಮಿ|| 159ನೇ ನಂ. ಡಿಕ್ರೀ ಮೊಬಲಗು
2	ಪಳ್ಳಿಗರ ಯರ್ರಪ್ಪ	42—8—0	ಡಿಟೋ
3	ಮಾಲೂರು ಗೊಲ್ಲ ಪಿಲ್ಲಣ್ಣ ..	3—0—0	ಲೆಕ್ಕದ ಬಾಕಿ
4	ಪೂಜಾರಿ ಹನುಮಪ್ಪ ..	25—0—0	ಪತ್ರದ ಬಾಬತು
5	ಎ ಬ್ರಹ್ಮಣ್ಯಶೆಟ್ಟಿ ..	7—0—0	ಡಿಟೋ
6	ಸಂಜೀವಯ್ಯ ..	184—8—0	ಡಿಟೋ

ಸ್ ೧೮೯೬ನೇ ಇಸವಿ ಜೂನ್ 3ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಮ್ಮ ದಸ್ತಖತ್ತನಿಸಿ ಕೊಡಲ್ಪಟ್ಟಿದೆ.

ದಿವಾಳಿಯಾದ ಡಿಕ್ರಿ ದೇಣೇದಾರ ಚಿಕ್ಕಬಳ್ಳಾಪುರದ ತಾಲ್ಲೂಕು ಅಂದಾರ್ಲಹಳ್ಳಿಲಿರುವ ಕೃಷ್ಣಪ್ಪನ ಮಗ ತಿಮ್ಮಯ್ಯನ ವಿಷಯದಲ್ಲಿ—

ಸ್ಯ 1895—96ನೇ ಇಸವಿ ದಿವಾಳಿ ಕೇಸ್ ನಂಬರು 8.

ಹುಕುಂ,

ಮೇಲ್ಕಂಡ ತಿಮ್ಮಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಈ ಕೋರ್ಟು ರೂಬರೂ ಅರ್ಜಿದಾರನಾದ ತಿಮ್ಮಯ್ಯನ ಪರವಾಗಿ ಅಡ್ವೊಕೇಟ್ ಮೆಸ್ಸರ್ ಎಸ್. ಸುಬ್ಬರಾಯರಿಗಾಗಿ, ಅಡ್ವೊಕೇಟ್ ಮೆಸ್ಸರ್ ಅಳಸಿಂಗಾಚಾರ್ರ ವರ ಯದುರಿಗೆ ದರ್ಯಾಫ್ತ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು, ತಮಗೆ ಈ ದರ್ಯಾಫ್ತ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದೆ, —1ನೇ ಚಿಕ್ಕಬಳ್ಳಾಪುರದ ತಾಲ್ಲೂಕು ಅಂದಾರ್ಲ ಹಳ್ಳಿಲಿರುವ ಅಬ್ಬಗುಡ್ಡೇಗವ್ವಡ 2 ಚಿಕ್ಕಬಳ್ಳಾಪುರದಲ್ಲಿರುವ ಕುಂಭಕೋಣದ ದೊಡ್ಡ ಕೃಷ್ಣವಧಾನಿ 3ನೇ ಡಿಟೋ ಸ್ಥಳದ ಲ್ಲಿರುವ ಕುಂಭಕೋಣದ ನರಹರಿ ಶಾಸ್ತ್ರಿ 4ನೇ ಸದರೀ ಸ್ಥಳದಲ್ಲಿರುವ ಯಲೇ ತೋಟದ ಚಿಕ್ಕ ಬುಡ್ಡಂಣ 5ನೇ ಸದರೀ ಸ್ಥಳದಲ್ಲಿರುವ ಬಂಡಾರಿ ವೆಂಕಟಪ್ಪ, 6ನೇ ಸದರೀ ಸ್ಥಳದಲ್ಲಿರುವ ಅದಾಲತ್ತು ಬ್ಯಾಂಕ್ ಪಿಜಂಟ್ ಕುಕ್ಕಲ ಅಣ್ಣಯ್ಯ, 7ನೇ ಸದರೀ ಸ್ಥಳದಲ್ಲಿರುವ ಶಂಕರನಾರಾಯಣರಾವ್, 8ನೇ ಚಿಕ್ಕಬಳ್ಳಾಪುರದ ತಾಲ್ಲೂಕು ನಂದೀಲಿರುವ ಹುರಳಗುರ್ಕಿ ರಾಮಯ್ಯ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ತಿಮ್ಮಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾಗವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನು ನಿರ್ಬಂಧದಿಂದ ವಿವೋ ಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

1896ನೇ ಇಸವಿ ಜನವರಿ 30ನೇ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ರುಜುವಾತಾದ ಸಾಲದಪಟ್ಟಿ.

ನಂಬರು.	ಲೇಣೇದಾರ್ರ ಹೆಸರು.	ಸಾಲದ ಮೊಬಲಗು.	ಷರಾ.
1	ಚಿಕ್ಕಬಳ್ಳಾಪುರದ ತಾಲ್ಲೂಕು ಅಂದಾರ್ಲಹಳ್ಳಿಲಿರುವ ಅಬ್ಬಗುಡ್ಡೇಗವ್ವಡ	296— 5—4	ಚಿಕ್ಕಬಳ್ಳಾಪುರದ ಮುನಿಸಿಫ್ ಕೋರ್ಟು 1888ನೇ ಇಸವಿ ಸಿವಿಲ್ 570ನೇ ನಂ. ಡಿಕ್ರಿ ಮೊಬಲಗು.
		54— 0—6	ಡಿಟೋ ಕೋರ್ಟು 1890ನೇ ಇಸವಿ ಸಿವಿಲ್ 596ನೇ ನಂ. ಡಿಕ್ರೀ ಮೊಬಲಗು.
		400— 0—0	ಪತ್ರದ ಮೊಬಲಗು.
2	ಕುಂಭಕೋಣದ ದೊಡ್ಡಕೃಷ್ಣವಧಾನಿ	143— 4—2	ಡಿಕ್ರೀ ಮೊಬಲಗು.
3	ಡಿಟೋ ನರಹರಿಶಾಸ್ತ್ರಿಗಳು,	40— 0—0	ಡಿಟೋ
	ಡಿಟೋ ದೊಡ್ಡಕೃಷ್ಣವಧಾನಿ ನರಹರಿಶಾಸ್ತ್ರಿಸಹ	18— 9—6	ಡಿಟೋ
4	ಯಲೇತೋಟದ ಚಿಕ್ಕ ಬುಡ್ಡಂಣ	144— 7—9	ಡಿಟೋ
5	ಬಂಡಾರೀ ವೆಂಕಟಪ್ಪ	80— 0—0	ಆಧಾರದ ಪತ್ರದ ಮೊಬಲಗು.
6	ಅದಾಲತ್ತು ಬ್ಯಾಂಕ್ ಪಿಜಂಟ್ ಕುಕ್ಕಲ ಅಣಿಯ್ಯ	54— 6—8	ಡಿಕ್ರೀ ಮೊಬಲಗು.
7	ಶಂಕರನಾರಾಯಣರಾವ್	55—14—8	ಡಿಟೋ
8	ಹುರಳಗುರ್ಕಿ ರಾಮಯ್ಯ	300— 0—0	ಪತ್ರದ ಮೊಬಲಗು.

ಸ್ಯ 1896ನೇ ಇಸವಿ ಮೇ 29ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ದಿವಾಳಿಯಾದ ಡಿಕ್ರಿ ದೇಣೇದಾರ ಬೆಂಗಳೂರು ಬಳ್ಳಾಪುರದ ಪೇಟೆ ರಂಗಸ್ವಾಮಿಗುಡಿ ಕೈಸಾಲೆಯಲ್ಲಿರುವ ಚಲಗಾರ ಭಗವತಿ ಮಗ ಮುನಿಸಾಮಿಯ ವಿಷಯದಲ್ಲಿ—

ಸ್ಯ 1895—96ನೇ ಇಸವಿ ದಿವಾಳಿ ಕೇಸ್ ನಂಬರ್ 325.

ಹುಕುಂ,

ಮೇಲ್ಕಂಡ ಮುನಿಸಾಮಿಯು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಈ ಕೋರ್ಟು ರೂಬರೂ ಅರ್ಜಿದಾರರಾದ ಮುನಿಸಾಮಿಯನ್ನೂ ಮತ್ತು ಸದರೀಯವರ ಲೇಣೇದಾರರಾದ ಬೆಂಗಳೂರು ಅರಳೇಪೇಟೆಯಲ್ಲಿರುವ ಮ್ಯುನಿಸಿಪಲ್ ಬೋರ್ಡು ದಫೇದಾರ ಬುಸ್ಸಪ್ಪನ ಯದುರಿಗೂ ದರ್ಯಾಫ್ತ್ತೀ ಮಾಡಲ್ಪಟ್ಟಿತು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಮುನಿಸಾಮಿಯು ತನ್ನ ಸಾಲಗಾರ್ರಿಗೆ ಪಾವತಿ ಬಗ್ಗೆ ಮಾಹೆಯಾನಾ ತಪ್ಪದೆ ಕೋರ್ಟಿಗೆ ಯರಡು ರೂಪಾಯಿ ಹಾಜರ್ಮಾಡುವ ಪರತ್ತಿನ ಮೇಲೆ ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿವೋ ಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ರುಜುವಾತಾದ ಸಾಲದ ಪಟ್ಟಿ,

ನಂಬರು.	ಲೇಣೇದಾರು ಅಥವಾ ದಾವಾದಾರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಸೊಬಲಗು.	ಡಿಕ್ರೀ ಪೈಸೆಗೆ ರೂಪಾಯಿಗೆ ಇಷ್ಟರಂತೆ ಬಡ್ಡಿ	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಪರಾ.
1	ಬೆಂಗಳೂರು ಅರಳೆಪೇಟೆಯಲ್ಲಿರುವ ಮ್ಯೂನಿಸಿಪಲ್ ಬೋರ್ಡು ದಫೇದಾರ ಬುಸ್ಸಪ್ಪ. ..	89—8—10	..	ಬೆಂಗಳೂರು ಸಬಾರ್ಡಿನೇಟ್ ಜಡ್ಜಿಯವರ ಕೋರ್ಟ್ 1890ನೇ ಇಸವಿ ಸ್ಮಾಲ್‌ಕಾಜ್ 2557ನೇ ನಂಬರ್ ಡಿಕ್ರೀ ಮೊಬಲಗು.	

ಸ್ರ 1896ನೇ ಇಸವಿ ಜೂನ್ 15ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿದೆ.

ದಿವಾಳಿಯಾದ ಡಿಕ್ರಿ ದೇಣೇದಾರ ನೆಲವಂಗಲ ತಾಲ್ಲೂಕು ಸೊಂಡೇಕೊಪ್ಪದ ಸಮ್ಮತು ಗೋರಿನಬೆಲೆಯಲ್ಲಿರುವ ಈಸಾಘಟ್ಟದ ಹನುಮಂತನ ವಿಷಯದಲ್ಲಿ—

ಸ್ರ 1894—95ನೇ ಇಸವಿ ದಿವಾಳಿ ವ್ಯಾಜ್ಯ ನಂಬರ 339.

ಹುಕುಂ,

ಮೇಲ್ಕಂಡ ಹನುಮಂತನು ಖುಲಾಸೆಯಾಗಬೇಕೆಂದು ಕೋರಿ ಬರದುಕೊಂಡ ಅರ್ಜಿಯು ಈ ಕೋರ್ಟ್ ರೂಬರೂ ಅರ್ಜಿದಾರನಸಮಕ್ಷಮದಲ್ಲಿಯೂ ಮತ್ತು ಐರ್ಜ್ ಅರ್ಜಿದಾರನ ಲೇಣೇದಾರರಾದ 1ನೇ ನೆಲವಂಗದಲ್ಲಿರುವ ಮರಾಟಿ ಲಕ್ಷ್ಮಣರಾಯರ ತರಫ್ ಅಡ್ವೊಕೇಟ್ ಮೆಸ್ಸರ್ಸ್ ಕೆ. ಟಿ. ನರಸಿಹ್ಮಯ್ಯಂಗಾರ್ರವರ ಯದುರಾಗಿಯೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರಿಗೆ ಈ ದರ್ಯಾಫ್ತ್ ನೋಟಿಸ್ ಜಾರಿಯಾಗಿದ್ದಾಗ್ಯೂ ತಾವೇ ಖುದ್ದಾಗಿಯಾಗಲಿ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ,—2ನೇ ನೆಲವಂಗದಲ್ಲಿರುವ ಕೋವುಟ ಅಂಜನಯ್ಯ, 3ನೇ ನೆಲವಂಗಲದ ತಾಲ್ಲೂಕು ಮಲ್ಲರಬಾಣಾವಾಡಿಯಲ್ಲಿರುವ ಚನ್ನವೀರದೇವರು, 4ನೇ ನೆಲವಂಗಲದ ತಾಲ್ಲೂಕು ಜೋಡಿ ಹಂಚಿಪುರಕ್ಕೆ ಕೇರಿ ಕರಿಕಲ್ಲುಪಾಳ್ಯದ ಚನ್ನರಾಯ, 5ನೇ ನೆಲವಂಗಲದ ತಾಲ್ಲೂಕು ಸೊಂಡೇಕೊಪ್ಪದ ಹೋಬಳಿ ಕವಲಗನಹಳ್ಳಿ, ಹೆಳವರ ತಿಮ್ಮ, 6ನೇ ನೆಲವಂಗಲ ತಾಲ್ಲೂಕು ಸೊಂಡೇಕೊಪ್ಪದಲ್ಲಿರುವ ಬಸ್ತರ ಮಾಯಿಗ, 7ನೇ ನೆಲವಂಗಲ ತಾಲ್ಲೂಕು ಚಪ್ಪಡಸಂದ್ರದಲ್ಲಿರುವ ದೇವಾಂಗದ ತಿಪ್ಪಣ್ಣ. 8ನೇ ನೆಲವಂಗಲ ತಾಲ್ಲೂಕು ಮಂಜೇನಹಳ್ಳಿಯಲ್ಲಿರುವ ವಕ್ಕಲಿಗರ ಮೂಡ್ಲಿ, 9ನೇ ನೆಲವಂಗಲದ ತಾಲ್ಲೂಕು ಹೊಸಹಳ್ಳಿಯಲ್ಲಿರುವ ತಮ್ಮಟಯ್ಯ, 10ನೇ ನೆಲವಂಗಲದಲ್ಲಿರುವ ಕೋವುಟ ನಾರಾಯಣಶಟ್ಟಿ.

ಸದರೀ ಹನುಮಂತನು ದಿವಾಳಿಯಾದವನೆಂದುನ್ನೂ ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಭ್ಯಾಯದಲ್ಲಿನ ನಿರೂಪಣೆಗಳ ಫಲವನ್ನು ಹೊಂದುವದಕ್ಕೆ ಹಕ್ಕುದಾರನಾಗಿರುತ್ತಾನೆಂದುನ್ನೂ ಇದರಿಂದ ತೀರ್ಮಾನಿಸಲ್ಪಟ್ಟಿರುತ್ತದೆ. 1ನೇ ಕ್ರಡಿಟರು ಲಕ್ಷ್ಮಣರಾಯರನ್ನು ಐರ್ಜ್ ದಿವಾಳಿಯಾದವನ ಜೆಂದಗಿಗೆ ರಿಸೀವರಾಗಿ ಪೊಕರರ್ ಮಾಡಲ್ಪಡತಕ್ಕದ್ದೆಂದುನ್ನೂ ಸದರೀ ರಿಸೀವರಾದವನು ವಡನೆ ತನ್ನ ರಿಸೀವರ್ ಕೆಲಸಗಳಿಗೆ ಪುದ್ಯುಕ್ತ ಪಡತಕ್ಕದ್ದೆಂದುನ್ನೂ ಸಹ ಹುಕುಂ ಮಾಡಲ್ಪಟ್ಟ್ಯು ಇಧೆ.

ಸ್ರ 1895ನೇ ಇಸವಿ ಡಿಸೆಂಬರ್ 21ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟ್ಯಿತು.

ಇದಕ್ಕೆ ಲಗತ್ತಾಗಿರುವ ಪಟ್ಟ್ಯಯಲ್ಲಿ ಕಂಡ ಜನರು ಅವರ ಹೆಸರಿಗೆ ಯದುರಾಗಿ ದಾಖಲಾಗಿರುವ ಸಾಲದ ಮೊಬಲಗುಗಳಿಗೆ ಲೇಣೇದಾರರೆಂದು ರುಜು ಮಾಡಿದ್ದಾರೆಂದು ಇದರಿಂದ ನಿಶ್ಚಯಿಸಿ ತೀರ್ಮಾನ ಮಾಡಲ್ಪಟ್ಟ್ಯು ಇಧೆ.

ನಂಬರ್.	ಲೇಣೇದಾರ್ರ ಹೆಸರು ವಿವರ ಮತ್ತು ವಾಸಸ್ಥಳ.	ಸಾಲವೆಂದು ರುಜುವಾದ ಮೊಬಲಗು.	ಸಾಲಗಳ ಸ್ವಭಾವ ಪ್ರತಿಫಲ ಮತ್ತು ವಿನಾದರೂ ಈಡು.
		ರೂ. ಅ. ಪೈ.	
1	ನೆಲವಂಗಲದಲ್ಲಿರುವ ಮರಾಟಿ ಲಕ್ಷ್ಮಣರಾವ್ .	225—14—6	ನೆಲವಂಗಲದ ಮುನಸಿಫ್ ಕೋರ್ಟ್ 1894—95ನೇ ಇಸವಿ ಜೂರಿ 587ನೇ ನಂ. ಬಾಡೀವಾರಂಟಿನಲ್ಲಿ ಕಂಡ ಮೊಬಲಗು.

ಸ್ರ 1896ನೇ ಇಸವಿ ಮಾರ್ಚಿ 10ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿದೆ.

ದಿವಾಳಿಯಾದ ಡಿಕ್ರಿ ದೇಣೇದಾರ ನೆಲವಂಕಲದ ತಾ.ಲ್ಲೂ.ಕು ತ್ಯಾವಮಗೊಂಡ್ಲಿನಲ್ಲಿರುವ ತಿವಾಚಾರದ ಸಂಗಣ್ಣನ ಮಗ ಸಿದ್ದಪ್ಪನ ವಿಷಯದಲ್ಲಿ—

ಸ್ರ 1895—96ನೇ ಇಸವಿ ದಿವಾಳಿ ಕೇಸ್ ನಂಬರು 154.

ಹುಕುಂ,

ಮೇಲ್ಕಂಡ ಸಿದ್ದಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಕವು ಈ ಕೋರ್ಟ್ ರೂಬರೂ ಅರ್ಜೀದಾರನನ್ನೂ ಮತ್ತು ಸದರೀಯವನ ಲೇಣೇದಾರ್ರಾದ 1ನೇ ನೆಲವಂಗಲ ತಾಲ್ಲೂಕು ತ್ಯಾವಮಗೊಂಡ್ಲಿನಲ್ಲಿರುವ ಮುಳಕಲ್ ರಾಮಸ್ವಾಮಿಶಟ್ಟರ ತರಫ್ ಮೆಸ್ಸರ್ಸ್ ಕೆ. ಟಿ. ನರಸಿಹ್ಮಯ್ಯಂಗಾರ್ರವರ ಯದುರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತ್ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ,—2ನೇ ತ್ಯಾವಮಗೊಂಡ್ಲಿನಲ್ಲಿರುವ ಕುದೂರು ಹನುಮಂತಪ್ಪ, 3ನೇ ತಿಪಟೂರಲ್ಲಿರುವ ಮಾರವಾಡಿ ಪನ್ನಾಜಿ ಧನ್ನಾಜಿ, 4ನೇ ತಿಪಟೂರು ತಾಲ್ಲೂಕು ಗುರುಗದಹಳ್ಳಿಯಲಿರುವ ಚನ್ನಬಸಯ್ಯನಮಗ ರುದ್ರಪ್ಪ, 5ನೇ ಡಿಟೋ ಸ್ಥಳದಲ್ಲಿರುವ ಗುರುವಣ್ಣಯ್ಯನಮಗ ರುದ್ರಪ್ಪ, 6ನೇ ತುಮಕೂರು ತಾಲ್ಲೂಕು ಉರುಡುಗೆರೆಯಲ್ಲಿರುವ ಮಲ್ಲಶಟ್ಟಪ್ಪ.

367

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಶಿದ್ದಪ್ಪನು ತನ್ನ ಸಾಲಗಾರ್‌ಗೆ ಪೂರ್ವತಿಬ್ಯೂನಲ್ ಮಾಹೆಯಾನಾ ತಪ್ಪದೆ ಕೋರ್ಟಿಗೆ ಯರಡು ರೂಪಾಯಿ ಹಾಜರ್ಮಾಡುವ ಷರತ್ತಿನ ಮೇಲೆ ಹೊಂದುವದಕ್ಕೆ ಹಕ್ಕು ದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನು ನಿರ್ಬಂಧನಿಂದ ವಿವೇಚನೆ ಮಾಡಿರುವ ದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವಸಾಲಕ್ಕೂ ಸ್ಕ್ಯರವಾಗಿಯೂಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾ ಬ್ದಾರಿಯಿಂದ ಸಹ ಅವನನ್ನು ನಿಖಾಲಸ್ ಮಾಡಲಾಗಿರುತ್ತೆ ಯೆಂದು ಯಿದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

1896ನೇ ಇಸವಿ ಮಾರ್ಚಿ ತಿಂಗಳ 11ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರು ನಮ್ಮ ದಸ್ತಖತ್‌ನಿನಿ ಕೊಡಲ್ಪಟ್ಟಿತು.

ರುಜುವಾತಾದ ಸಾಲದಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೇ ಹುಟ್ಟಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ನಿಯೇನಾದರೂ ಇದ್ದರೆ.	ಷರಾ.
1	ನೆಲವಂಗಲದ ತಾಲ್ಲೂಕು ತ್ಯಾವುಗೊಂಡ್ಲನಲ್ಲಿರುವ ಮುಲಕಲ್ ರಾಮೆಸ್ವಾಮಿಶಟ್ಟಿ ..	24—6—0		ನೆಲವಂಗಲದ ಮುನಸಿಫ್ ಕೋರ್ಟು 1894–95ನೇ ಇಸವಿ ಸಿವಿಲ್ 342ನೇ ನಂ. ಡಿಕ್ರೀ ಮೊಬಲಗು	
2	ಕುದೂರು ಹನುಮಂತಪ್ಪ ..	20—0—0		ಪತ್ರದ ಬಗೆ	
3	ಪನ್ನಾಜಿ ಧನ್ನಾಜಿ ..	105—0—0		ಪಾತ್ರಸಾಮಾನುಗಳು ತಂದಬಗೆ	
4	ಚನ್ನಬಸವಯ್ಯನ ಮಗ ರುದ್ರಪ್ಪ ..	50—0—0		ಡಿಟೋ	
5	ಗುರುವಣ್ಣಯ್ಯನ ಮಗ ರುದ್ರಪ್ಪ ..	75—0—0		ಕೈ ಬದಲುಬಾಬತು	
6	ಮಲ್ಲಶಟ್ಟಪ್ಪ ..	250—0—0		ತಮಸೂಕು ಬಗೆ	

ಸ್ಯ 1896ನೇ ಇಸವಿ ಜೂನ್ 6ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಮ್ಮ ದಸ್ತಖತ್ತುನಿಶಿ ಕೊಡಲ್ಪಟ್ಟಿತು.

ಟಿ. ನರಹರರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಫಾರೆಸ್ಟ್ ಇಲಾಖೆ.

ಇಸ್ತಿಹಾರ್.

ತಾರೀಖು 2ನೇ ಸೆಪ್ಟೆಂಬರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲಿಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಅವುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರು ಮತ್ತು ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವುವು.

ಡಿಸ್ಟ್ರಿಕ್ಟು.	ಕೋಠಿ ಹೆಸರು.	ಹರಾಜು ತಾರೀಖು.
ಮೈಸೂರು	ಹುಣಸೂರು	28ನೇ ನವಂಬರ್ 1896.
ಡಿಟೋ	ಶ್ರೀರಂಗಪಟ್ಟಣ	1ನೇ ಡಿಸೆಂಬರ್ ,,
ಬೆಂಗಳೂರು	ಬೆಂಗಳೂರು	4ನೇ ಡಿಟೋ ,,
ಹಾಸನ	ಹಾಸನ	7ನೇ ಡಿಟೋ ,,
ಕಡೂರು	ಚಿಕ್ಕಮಗಳೂರು	10ನೇ ಡಿಟೋ ,,
ಶಿವಮೊಗ್ಗಾ	ಶಿವಮೊಗ್ಗಾ	15ನೇ ಡಿಟೋ ,,
ಡಿಟೋ	ಸಾಗರ	18ನೇ ಡಿಟೋ ,,
ಡಿಟೋ	ತೀರ್ಥಹಳ್ಳಿ	22ನೇ ಡಿಟೋ ,,

2. ಈ ವರುಷ (i) ಬೆಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಅಜಮಾಯಿಷಿ ಬಗ್ಗೆ ಮೈಸೂರು ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಯರಡು ವಿಧವಾಗಿ ಸಂದಲನ್ನು ರಾಸು ಮಾಡಿಸಿರುತ್ತೆ.

3. ಇದುವರಿವಿಗೂ ಜಾರಿಯಲ್ಲಿರುವ ವಜನಿ ಬಟ್ಟುಗಳೇ ಈಗಲೂ ಉಪಯೋಗಿಸಲ್ಪಡುವುವು.

4. ಪ್ರತಿ ಕೋಠಿಯಲ್ಲಿಯೂ ಬಿಕರಿ ಬಗ್ಗೆ ವದಗಿಸಲ್ಪಡುವ ಸಂದಲಿನ ತರಹೆಗಳ ಪೊತ್ತವನ್ನು ಇದರಡಿ ವಿವರಿಸಿಹೆ.